ಕಥೆ

# ಗಾವು



**ಕಮಲಾ ನರಸಿಂಹ**

ಕಲೆ: ಕುಮಾರ್ ಕಾಟೇನಹಳ್ಳಿ

ಉಪವಿಭಾಗಾಧಿಕಾರಿಗಳ ಗಮನಕ್ಕೆ ಈ ಊರಲ್ಲಿ ಏನು ತಾನೆ ಬರುತ್ತೆ ಹೇಳಿ. ಅಧಿಕಾರಿಗಳು ಏನು ಮಾಡಬೇಕೆಂದು ಅಪ್ಪಣೆ ಮಾಡಿದರೆ ಅದು ನಡೆಯುತ್ತದೆ. ಊರ ಮಾರಮ್ಮನ ಜಾತ್ರೆಗೆ ಹತ್ತೂರು ಸೇರಿಸಿ ಸೋಜಿಗ ಉಂಟು ಮಾಡುವ ಘಟನೆಗಳು ನಡೆಯಬಾರದೆಂದರೆ ಊರ ಸರಪಂಚರು ಸುಮ್ಮನಿರುತ್ತಾರೆಯೆ?! ಉರಿಬಿಸಿಲಿನಲ್ಲೂ ಜನ ಜಾತ್ರೆಯಲ್ಲಿ ತಂಪಾಗುತ್ತಾರೆ. ಈ ಬಾರಿ ಊರ ಜಾತ್ರೆಗೆ ಗಾವು ಸಿಗಯುವ ಪ್ರಸಂಗವೇ ಕಟ್ಟ ಕಡೆಯ ಆಟ. ನಂತರ ಜಾತ್ರೆ ಬರಕಾಸ್ತಾಗತ್ತೆ. ಸುತ್ತಮುತ್ತಲಿನ ಹಳ್ಳಿ, ಹೋಬಳಿಯವರೆಲ್ಲ ಮೊದಲೇ ಬಂದು ಜಾಗ ಖಾಯಂಗೊಳಿಸಿಕೊಳ್ಳುತ್ತಾರೆ. ಕಡ್ಲೆಪುರಿ, ಬೆಂಡು ಬತ್ತಾಸು, ಬೋಂಡ, ಬಜ್ಜಿ, ಕಲ್ಲಂಗಡಿ ಕರಬೂಜೆ, ಮೆರವಣಿಗೆಯೇ ಸರಿ. ಊರ ಹೊರಗಿನ ಮಾರಮ್ಮನನ್ನು ಊರ ಒಳಗೆ ತಂದು ಮಡಿಲು ತುಂಬಿ ವಿವಿಧ ಸೇವೆಗಳನ್ನು ಹತ್ತು ದಿನ ನಡೆಸಿ ಬೇಕಾದಷ್ಟು ಪ್ರಾಣಿ ಬಲಿ ನೀಡಿ ಸಾಂತ್ವನಗೊಳಿಸಿ ಕಡೆಯ ದಿನ ಗಾವು ಸಿಗಿದ ಮೇಲೆ ಊರೆಲ್ಲಾ ಸ್ತಬ್ಧವಾಗುತ್ತದೆ. ರಾತ್ರಿ ಯಾರೂ ಓಡಾಡಬಾರದೆಂದು ಹೇಳಿ, ಮಾರನೆ ದಿನ ಮಾರಮ್ಮನಿಗೆ ಸರ್ವಾಲಂಕಾರ ಮಾಡಿ ಉಡಿದುಂಬಿಸಿ ಬರುತ್ತಾರೆ. ಈ ಹತ್ತು ದಿನ ಊರ ತುಂಬ ಅರೆ ಬಡಿಯುವ ಶಬ್ದ ಸದಾ ಗುಂಯ್ ಗುಡುತ್ತಲಿರುತ್ತದೆ. ಬೆಳಗಿನ ಜಾವ ಕೋಣದ ಮೆರವಣಿಗೆ ಊರ ತುಂಬ ನಡೆಸಿ ಹತ್ತು ರೀತಿ ಅಲಂಕಾರ ಮಾಡಿ ಜನ ಕುಣಿಯುತ್ತಾರೆ. ಜನ ಮರುಳೋ ಜಾತ್ರೆ ಮರುಳೋ ಎಂಬಂತೆ ಸೋಜಿಗ ನೋಡುವ ಕಣ್ಣುಗಳಿಗೆ ಇದು ಸರಿ ಇದು ತಪ್ಪು ಎನ್ನುವ ತಿಳಿವಳಿಕೆ ಕೂಡ ಇಲ್ಲದಾಗುತ್ತದೆ.

ಉಪವಿಭಾಗಾಧಿಕಾರಿ ಸುಜನ್ ಈ ಜಾತ್ರೆಯ ವಿಷಯಗಳನ್ನು ಮೇಲು ನೋಟಕ್ಕೆ ನೋಡಿ ಒಪ್ಪಿಗೆ ನೀಡಿದ್ದರೂ ಒಳಗೊಳಗೆ ಯೋಜನೆ ತೀವ್ರಗೊಳ್ಳುತ್ತಿತ್ತು. ತಾನೊಬ್ಬ ಅಧಿಕಾರಿಯಾಗಿ ಈ ಜಾತ್ರೆಯ ಒಳ ಹೊರಗೆ ನಡೆಯುವ ಪ್ರಾಣಿಬಲಿಗಳ ಬಗ್ಗೆ ತೀವ್ರ ಖಂಡನೆ ಮಾಡದಿದ್ದರೆ ನ್ಯಾಯವಾದುದಲ್ಲ ಎಂದು ತೀರ್ಮಾನಿಸಿದ. ಮಾರಮ್ಮನೆಂಬುದು ಕೇವಲ ನಿಮಿತ್ತ ಮಾತ್ರ ಇಲ್ಲಿ. ಈ ಜನಗಳ ಮೌಢ್ಯದ ಮಹಾಪೂರ ಇಲ್ಲಿ ಸತ್ಯಗಳನ್ನು ಮರೆಮಾಚುತ್ತಿದೆ. ಹೇಗಾದರೂ ಇದನ್ನು ಭೇದಿಸಬೇಕು. ಗಾವು ಸಿಗಿಯುವ ವ್ಯಕ್ತಿ ಒಂದು ವಂಶಕ್ಕೆ ಸೇರಿದವ. ತಲತಲಾಂತರದಿಂದ ಅವರ ವಂಶಜರು ಹೀಗೆ ಗಾವು ಸಿಗಿಯುವ ಸೋಜಿಗ ಉಂಟುಮಾಡುವುದರಲ್ಲಿ ನಿಸ್ಸೀಮರು. ಅವನಿಗೆ ಎಷ್ಟೋ ದುಡ್ಡು ಕೊಡುವುದಾಗಿ ಮಾತಾಡಿಕೊಂಡು ಬಂದು ಅವನ ಕೈಲಿ ಈ ಗಾವು ಸಿಗಿಯುವ ನಾಟಕ ಆಡಿಸುತ್ತಾರೆ.

ಸುಜನ್ ಬಹಳ ಹೊತ್ತು ಆಲೋಚನೆ ಮಾಡಿ ತನ್ನ